ತಾವು ಹೊರಟು ಬರಬೇಕು' ಎಂದು ಹೇಳಿ ಪಾದಕ್ಕೆ ಎರಗಿದರು.

ಅದನ್ನು ಕೇಳಿ ಸಂತೋಷಗೊಂಡ ದಮಯಂತಿಯು ಅವರಿಗೆ ಆಭರಣ ಹಾಗೂ ಅಮೂಲ್ಯ ವಸ್ತುಗಳನ್ನು ಬಹುಮಾನವಾಗಿ ನೀಡಿದಳು. ಹರ್ಷೋಲ್ಲಾಸದಿಂದ ತಂದೆಗೆ ಬಂದು ನಮಿಸಿ ವಿಜಯ ವಾರ್ತೆ ತಿಳಿಸಿದಳು. ವಿನಯ ಪೂರ್ವಕವಾಗಿ,

'ನಾಳೆಯೇ ನನ್ನನ್ನು ನಿಷಧಾನೃಪನಲ್ಲಿಗೆ ಕಳುಹಿಸಿ' ಎಂದು ಕೇಳಿಕೊಂಡಳು. ಮಗಳನ್ನು ಆನಂದದಿಂದ ಭೀಮನೃಪನು ಅಪ್ಪಿಕೊಂಡನು.

ಭಂಡಾರದಿಂದ ಬಗೆ ಬಗೆಯ ವಸ್ತುಗಳನ್ನು ತೆಗೆಸಿದನು. ವೀರ ಯೋಧರಿಗೆ ಝಗ ಝಗಿಸುವ ಹೊನ್ನ ಆಯುಧಗಳನ್ನು ನೀಡಿದನು. ಸುಗುಣೆಯರಾದ ಸ್ತ್ರೀ ಪರಿವಾರದವರಿಗೆ ನವರತ್ನಗಳ ತೊಡವುಗಳನ್ನು ಕೊಟ್ಟನು. ರಾಜಾಜ್ಞೆಯಂತೆ ಪಯಣಿಸುವ ತೇರುಗಳಿಗೆ ಬಿರುದಿನ ಬಾವಲಿಗಳ ಪಟಗಳನ್ನು ಕಟ್ಟಿ ಶೃಂಗರಿಸಿದರು.

ದುರೆಗಳಿಗೆ ಜೀನು ಹಾಕಿದರು. ಆನೆಗಳ ಮೇಲೆ ಸವಾರಿಗಾಗಿ ಅಂಬಾರಿ ಯನ್ನು ರಚಿಸಿದರು. ರಥದ ಮೇಲೆ ಬೆಳಗುವ ಕಳಶಗಳಲ್ಲಿ ಶ್ವೇತಛತ್ರವನ್ನು ಕಟ್ಟಿದರು. ಸೊಗಸು ಬೀರುವ ವೀರರು ಕೈಗಳಲ್ಲಿ ಆಯುಧಗಳನ್ನು ಹಿಡಿದು ಸಜ್ಜಾದರು. ರಾಜರ ಪಕ್ಕದಲ್ಲಿ ಚಾಮರಗಳನ್ನು ಬೀಸುವವರು ಸಂಭ್ರಮದಿಂದ ನಿಂತರು.

ರತ್ನಗಳಿಂದ ರಚಿತವಾದ ರಥಗಳ ನಡುವೆ ಪಲ್ಲಕ್ಕಿಗಳ ಸಾಲುಗಳಿದ್ದವು. ಮಧ್ಯದಲ್ಲಿ ಘೀಳಿಡುವ ಆನೆಗಳನ್ನು ನಡೆಸುವ ಮಾವುತರ ಕಳಕಳರವವಿತ್ತು. ಕುಣಿವ ಕುದುರೆಗಳನ್ನು ಏರಿದ ರಾವುತರ ಸಮೂಹದಲ್ಲಿ ಚತುರಂಗ ಬಲವು ಗುಂಪಾಗಿ ಸಾಗಿತು. ಅವುಗಳ ಸಾಲು ಛತ್ರಗಳ ಸೊಗಸು ಸಂಭ್ರಮವನ್ನು ಸೂಚಿಸುತ್ತಿತ್ತು. ನಾರಿಯರು ಗುಂಪು ಗುಂಪಾಗಿ ಬಂದರು. ತೇರಿನಲ್ಲಿ, ಪಲ್ಲಕ್ಕಿಯಲ್ಲಿ, ಕುದುರೆಗಳ ಮೇಲೆ, ಆನೆಗಳ ಅಂಬಾರಿಯಲ್ಲಿ ಆಸೀನರಾದರು. ಮುಂದೆ ಘನ ಗಂಭೀರವಾದ ವಾದ್ಯಗಳು ಮೊಳಗುತ್ತಿದ್ದವು.

ಮನದ ಹರ್ಷಾನಂದದಲಿ ನಡೆ ತಂದು ಹೊಕ್ಕಳು ನಿಷಧಪಟ್ಟಣವ

ದಮಯಂತಿಯು ತನ್ನ ಮಕ್ಕಳೊಂದಿಗೆ ಬಂದು 'ದೇವ ಮುಕುಂದ ರಕ್ಷಿಸು' ಎಂದು ಹೇಳುತ್ತ, ರತ್ನಮಯ ರಥವನ್ನು ಏರಿ ಕುಳಿತಳು. ಹಿಂದೆ ಮುಂದೆ, ಎಡ ಬಲಗಳಲ್ಲಿ ನಾರಿ ವೃಂದ ನಡೆದು ಬರುತ್ತಿರಲು ಹರ್ಷಾನಂದದಲ್ಲಿ ನಿಷಧ ಪಟ್ಟಣವನ್ನು ಪ್ರವೇಶಿಸಿದಳು.

ಪುರಜನರು ಉಪ್ಪರಿಗೆಯಲ್ಲಿ, ಮಾಳಿಗೆಯಲ್ಲಿ ನಿಂತು; ಮನೆಯ ಕಿಟಕಿಗಳಿಂದ ಇಣುಕಿ ದಮಯಂತಿಯನ್ನು ನೋಡುತ್ತಿದ್ದರು. ಅವಳು ನೋಡುವವರನ್ನು ನಸುನಕ್ಕು ನೋಡಿ ಕೈಬೀಸುತ್ತ; ಹಾಡುವವರನ್ನು, ನರ್ತಿಸುವವರನ್ನು ಕಂಡು ನಲಿಯುತ್ತ ಅರಮನೆಗೆ ಬಂದಳು.

ಬಾಗಿಲ ಬಳಿ ರಥವಿಳಿದು ಸಂತೋಷದಿಂದ ನಿಂತಿರಲು, ಪಣ್ಯಾಂಗನೆಯರು ಸಂಭ್ರಮದಿಂದ ಆರತಿ ಬೆಳಗಿದರು. ಮುನಿ ವೃಂದವು 'ಶ್ರೀ ವಿಷ್ಣುವಿನ ಅನುಗ್ರಹ ನಿಮಗುಂಟಾಗಲಿ. ನೀವು ಸದಾ ಸುಖಿಯಾಗಿರಿ' ಎಂದು ಆಶೀರ್ವದಿಸುತ್ತ ಮಂತ್ರಾಕ್ಷತೆಗಳನ್ನು ತಳಿದರು.

ಹರಕೆಗಳನ್ನು ಸ್ವೀಕರಿಸುತ್ತ ದಮಯಂತಿ ಅರಮನೆಯನ್ನು ಪ್ರವೇಶಿಸಿದಳು. ನಳನೃಪಾಲನ ಚರಣ ಕಮಲಗಳಿಗೆ ನಮಸ್ಕರಿಸಿ ಅವನನ್ನು ಮನ ತುಂಬಿ ನೋಡಿದಳು. ನಿಷಧಾಪತಿಯು ತನ್ನ ಸತಿ ಸುತರೊಡಗೂಡಿ ಮಂಗಳಮಯವಾಗಿ ಕಂಗೊಳಿಸಿದನು. ಎಲ್ಲ ದೇವತೆಗಳು ಅವನನ್ನು ಕೊಂಡಾಡಿದರು.

ಶ್ರೀಹರಿಯ ಕೃಪೆಯಿಂದ ಪರಮ ಪುಣ್ಯೋದಯ, ಸದ್ಗುಣಭರಿತ, ಸತ್ಯ ಸುಭಾಷಿತ, ರಣಧೀರ, ನಿತ್ಯನಿರ್ಮಲ, ವೇದಪಾರಂಗತ ನಳಮಹಾರಾಜನು ಸಿಂಹಾಸನದಲ್ಲಿ ಶೋಭಿಸುತ್ತ ರಾಜ್ಯವಾಳಿದನು.

(ಮುಗಿಯಿತು)

## ವಿವೇಕಾನಂದ ಕಾಮತ್ ಬರೆದ

